**ದಿನಾಂಕಃ 24.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ.ಪಿ ವಕೀಲರಿಂದಃ**

ಪ್ರತಿವಾದಿಗಳು ನಮಗೆ ತೊಂದರೆ ನೀಡುತ್ತಿರುವುದರಿಂದ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ. ನನಗೆ ಓದಲು ಬರೆಯಲು ಬರದೇ ಇರುವುದರಿಂದ ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತುಗಳು ನನಗೆ ನನ್ನ ತಾಯಿಯ ಕಡೆಯಿಂದ ಬಂದಿರುತ್ತವೆ. ನಾನು ಮುದ್ದೇಗೌಡ ಎಂಬುವವರನ್ನು ಸುಮಾರು 36-37 ವರ್ಷಗಳ ಹಿಂದೆ ವಿವಾಹವಾಗಿರುತ್ತೇನೆ. ದಾವಾ ಅನುಸೂಚಿ ಸ್ವತ್ತುಗಳು ನನ್ನ ಹೆಸರಿಗೆ ನಾನು ಮುದ್ದೇಗೌಡರವರನ್ನು ವಿವಾಹದ ನಂತರ ಬಂದಿರುತ್ತವೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತುಗಳು ಮುದ್ದಲಿಂಗೇಗೌಡರವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳು ಎಂದರೆ ಸರಿ. ಮುದ್ದಲಿಂಗೇಗೌಡರವರ ಮರಣ ನಂತರ ಆಸ್ತಿಗಳು ವಾರಸು ಮೂಲಕ ಅವರ ಹೆಂಡತಿ ಮತ್ತು ಮಕ್ಕಳಿಗೆ ಬದಲಾವಣೆ ಆಗಬೇಕೇ ಹೊರತು ನಿಮ್ಮ ಹೆಸರಿಗೆ ಬದಲಾವಣೆ ಆಗಿರುವುದು ತಪ್ಪಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಅನುಸೂಚಿ ಸ್ವತ್ತುಗಳ ಖಾತೆಗಳು ನನ್ನ ಹೆಸರಿಗೆ ಬದಲಾವಣೆ ಆದರೂ ಸಹ ಮುದ್ದೇಗೌಡರವರೇ ದಾವಾ ಅನುಸೂಚಿ ಸ್ವತ್ತುಗಳಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ಮುದ್ದೇಗೌಡರವರು ಒಪ್ಪಿಗೆಯ ಮೇರೆಗೆ ಎಂ.ಸಿ ನಂ.47/1995 ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಎಂ.ಸಿ ನಂ.47/1995 ರಲ್ಲಿ ನಾನು ನನ್ನ ಗಂಡ ಮುದ್ದೇಗೌಡರವರಿಂದ ನನ್ನ ಮುಂದಿನ ಜೀವನಕ್ಕಾಗಿ ಜೀವನಾಂಶವನ್ನು ಹಣದ ರೂಪದಲ್ಲಿ ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳ ಚೆಕ್ಕುಬಂಧಿಗಳನ್ನು ನನಗೆ ಹೇಳಲು ಬರುವುದಿಲ್ಲ.

ನನ್ನ ಗಂಡ ಮುದ್ದೇಗೌಡರವರು ನನ್ನ ಜೊತೆ ವಿವಾಹ ವಿಚ್ಛೇದನವಾದ ನಂತರ 1 ನೇ ಪ್ರತಿವಾದಿ ಕೆಂಪಮ್ಮರವರನ್ನು ವಿವಾಹವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮುದ್ದೇಗೌಡರವರಿಂದ ವಿವಾಹವಿಚ್ಛೇದನ ಪಡೆದ 2 ವರ್ಷಗಳ ನಂತರ ಮಹದೇವ ಎಂಬುವವರನ್ನು ವಿವಾಹವಾಗಿದ್ದೇನೆ. ನಾನು ಮುದ್ದೇಗೌಡರವರಿಂದ ವಿವಾಹ ವಿಚ್ಛೇದನ ಪಡೆದ ನಂತರ ಮಹದೇವರವರನ್ನು ವಿವಾಹವಾಗುವ ಪೂರ್ವದಲ್ಲಿ ನಾನು ನನ್ನ ತಾಯಿಯ ಮನೆಯಲ್ಲಿ

ವಾಸವಾಗಿದ್ದೆನು ಎಂದರೆ ಸರಿ. ನಾನು ಮಹದೇವರವರನ್ನು ವಿವಾಹವಾದ ನಂತರ ಹೊಸಹಳ್ಳಿಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನಾನು ಹಬ್ಬಹರಿದಿನಗಳಲ್ಲಿ ಮಾತ್ರ ನನ್ನ ತಾಯಿಯ ಮನೆ ಇರುವ ಗೊರವನಹಳ್ಳಿ ಗ್ರಾಮಕ್ಕೆ ಬರುತ್ತೇನೆ ಎಂದರೆ ಸಾಕ್ಷಿದಾರರು ನಾನು ಆಗಾಗ ನನ್ನ ತಾಯಿಯ ಮನೆ ಇರುವ ಗೊರವನಹಳ್ಳಿ ಗ್ರಾಮಕ್ಕೆ ಬಂದು ಹೋಗುತ್ತೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ಯಾವ ದಿನಾಂಕ ನನಗೆ ತೊಂದರೆ ನೀಡಿದ್ದರು ಎಂದು ಹೇಳಲು ಆಗುವುದಿಲ್ಲ. ಅದೇ ರೀತಿ ಯಾವ ದಿನಾಂಕ ನಾನು ಪಂಚಾಯತಿಯನ್ನು ಸೇರಿಸಿದ್ದೆನು ಎಂದು ನನಗೆ ನೆನಪಿಲ್ಲ. ಪ್ರತಿವಾದಿಗಳು ದಾವಾ ಅನುಸೂಚಿ ಸ್ವತ್ತುಗಳಲ್ಲಿ ಸ್ವಾಧೀನತೆ ಹೊಂದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಅನುಸೂಚಿ ಸ್ವತ್ತುಗಳ ಖಾತೆಯು ನನ್ನ ಹೆಸರಿನಲ್ಲಿ ಇರುವುದರಿಂದ ಅದನ್ನು ದುರುಪಯೋಗಪಡಿಸಿಕೊಂಡು ನಾನು ಪ್ರತಿವಾದಿಗಳು ಸ್ವಾಧೀನತೆ ಹೊಂದಿರುವ ದಾವಾ ಅನುಸೂಚಿ ಸ್ವತ್ತುಗಳಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಅನುಸೂಚಿ ಸ್ವತ್ತುಗಳಿಗೆ ತೊಂದರೆ ನೀಡುತ್ತಿದ್ದೇನೆ ಎಂದು ಪ್ರತಿವಾದಿಗಳು ನನ್ನ ವಿರುದ್ಧ ಅಸಲು ದಾವಾ ಸಂ.154/2023 ರನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ